# ಕರ್ನಾಟಕ ಸರ್ಕಾರದ ನಡಾವಳಿಗಳು

ವಿಷಯ: 2011ನೇ ಸಾಲಿನ ಏಕಲವ್ಯ ಪ್ರಶಸ್ತಿ ಹಾಗೂ ಜೀವಮಾನ ಸಾಧನೆ ಪ್ರಶಸ್ತಿಯನ್ನು ಅರ್ಹ ಕ್ರೀಡಾಪಟುಗಳಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:

1) ದಿನಾಂಕ: 16-07-2012ರ ಯುಸೇಇ 188 ಯುಸೇಕ್ರೀ 2012ನೇ ಸಂಖ್ಯೆಯ ಸರ್ಕಾರದ ಆದೇಶ.
2) ದಿನಾಂಕ: 05-05-2012ರ ಯುಸೇಇ 209 ಯುಸೇಕ್ರೀ 2011ನೇ ಸಂಖ್ಯೆಯ ಸರ್ಕಾರದ ಆದೇಶ.
3) ದಿನಾಂಕ: 26-08-2012ರ ಡಿವೈಎಸ್ಎಸ್/ಕ್ರೀಕಪಂ-ಏಪ್ರ/2012-13ನೇ ಸಂಖ್ಯೆಯ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರ ಪತ್ರ.

******

ಪ್ರಸ್ತಾವನೆ:

2011ರ ಏಕಲವ್ಯ ಪ್ರಶಸ್ತಿ ಮತ್ತು ಜೀವಮಾನ ಸಾಧನೆ ಪ್ರಶಸ್ತಿ ನೀಡುವ ಸಲುವಾಗಿ ಅರ್ಹರಿಂದ ಅರ್ಜಿಗಳನ್ನು ಕರೆಯಲಾಗಿದ್ದು, ಈ ಸಂಬಂಧ ಕಛೇರಿಯಲ್ಲಿ ಹೊರಡಿಸಿದ ಅಧಿಸೂಚನೆಯಲ್ಲದೇ ವ್ಯಾಪಕ ಪ್ರಚಾರಕ್ಕಾಗಿ ಜಾಹೀರಾತುಗಳನ್ನು ಕೂಡ ಸುದ್ದಿ ಮಾಧ್ಯಮಗಳಲ್ಲಿ ಕೊಡಲಾಗಿದ್ದು, ಅದರ ಪ್ರತಿಯಾಗಿ ಏಕಲವ್ಯ ಪ್ರಶಸ್ತಿಗಾಗಿ 93 ಅರ್ಜಿಗಳು ಮತ್ತು ಜೀವಮಾನ ಸಾಧನೆ ಪ್ರಶಸ್ತಿಗಾಗಿ 38 ಅರ್ಜಿಗಳು ಸ್ವೀಕೃತವಾಗಿದೆಯೆಂದೂ, ಬಂದಂತಹ ಎಲ್ಲಾ ಅರ್ಜಿಗಳನ್ನು, ಮಾರ್ಗಸೂಚಿಗಳಂತೆ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20-08-2012 ಮತ್ತು 21-08-2012ರಂದು ಜರುಗಿದ ಪರಿಶೀಲನಾ ಸಮಿತಿ ಸಭೆಯಲ್ಲಿ ಉಲ್ಲೇಖ(1)ರ ಆದೇಶ ದಿನಾಂಕ: 16-07-2012ರ ಅನುಬಂಧದಲ್ಲಿ ನಮೂದಿಸಿರುವ ಮಾನ ದಂಡಗಳನ್ನು ಅನುಸರಣೆ ಮಾಡಿ, ನಿಯಮ ಹಾಗೂ ಅಂಕಪಟ್ಟಿಯನ್ನು ಅನುಸರಿಸಿದ ನಂತರ ಪರಿಶೀಲಿಸಲಾಯಿತೆಂದೂ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು ತಿಳಿಸಿರುವರು. 2011ನೇ ಸಾಲಿಗೆ ಉಲ್ಲೇಖ(1)ರ ದಿನಾಂಕ: 16-07-2012ರ ಆದೇಶದ ಮೂಲಕ ರಚಿಸಲಾದ ಯುವಜನ ಸೇವಾ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿನ ಏಕಲವ್ಯ ಪ್ರಶಸ್ತಿ ಆಯ್ಕೆ ಸಮಿತಿಯು ದಿನಾಂಕ: 22-08-2012ರಂದು ಸಭೆ ಸೇರಿ ವಿಷಯವನ್ನು ಚರ್ಚಿಸಿರುತ್ತದೆಯೆಂದೂ, 2011ನೇ ಸಾಲಿಗೆ 15 ಕ್ರೀಡಾಪಟುಗಳನ್ನು ಆಯ್ಕೆ ಮಾಡಬೇಕಾಗಿತ್ತಾದರೂ 16 ಅರ್ಹ ಕ್ರೀಡಾಪಟುಗಳನ್ನು ಸಮಿತಿಯು ಆಯ್ಕೆ ಮಾಡಿರುತ್ತದೆ. ಕಾರಣ, ಕಳೆದ 2010ನೇ ಸಾಲಿನಲ್ಲಿ ಒಟ್ಟು 15 ಕ್ರೀಡಾಪಟುಗಳನ್ನು ಆಯ್ಕೆ ಮಾಡಲಾಗಿತ್ತು. ಈ ಪೈಕಿ ಶ್ರೀ ರೋಷನ್ ಫೆರಾವ್ಲೋ, ಬಾಡಿಬಿಲ್ಡಿಂಗ್ ಕ್ರೀಡಾಪಟು, ಶ್ರೀ ಎಸ್. ನವೀನ್, ಕರಾಟೆ ಕ್ರೀಡಾಪಟು ಮತ್ತು ಶ್ರೀ ಪಿ. ಸೋಮಶೇಖರ್, ಅಂಗವಿಕಲ ಕ್ರೀಡಾಪಟು ಇವರ ಆಯ್ಕೆಯನ್ನು ಮತ್ತೊಮ್ಮೆ ಪರಿಶೀಲನೆಗಾಗಿ ತಡೆಹಿಡಿಯಲಾಗಿದ್ದು, ತಡೆಹಿಡಿಯಲಾದ 3 ಕ್ರೀಡಾಪಟುಗಳ ವಿಷಯದಲ್ಲಿ ಮುನರ್ ಪರಿಶೀಲನೆ ಮಾಡಿ ಹಿಂದಿನ ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24-03-2012ರಂದು ಜರುಗಿದ ಸಮಿತಿ ಸಭೆಯ ಮುಂದೆ ವಿಷಯವನ್ನು ಸವಿವರವಾಗಿ ಪರಿಶೀಲಿಸಿ ತಡೆಹಿಡಿಯಲಾದ ಶ್ರೀ ರೋಷನ್ ಫೆರಾವ್ಲೋ, ಬಾಡಿಬಿಲ್ಡಿಂಗ್ ಕ್ರೀಡಾಪಟು, ಶ್ರೀ ಎಸ್. ನವೀನ್, ಕರಾಟೆ ಕ್ರೀಡಾಪಟು ಇವರುಗಳನ್ನು ಆಯ್ಕೆ ಮಾಡಿಕೊಳ್ಳಲು ತೀರ್ಮಾನಿಸಿರುತ್ತದೆ. ಸಮಿತಿಯ ನಿರ್ಣಯದ ಆಧಾರದ ಮೇಲೆ ಸರ್ಕಾರವು ಉಲ್ಲೇಖ(2)ರ ದಿನಾಂಕ: 05-05-2012ರ ಆದೇಶದಲ್ಲಿ ಶ್ರೀ ರೋಷನ್ ಫೆರಾವ್ಲೋ, ಬಾಡಿಬಿಲ್ಡಿಂಗ್ ಕ್ರೀಡಾಪಟು, ಶ್ರೀ ಎಸ್. ನವೀನ್, ಕರಾಟೆ ಕ್ರೀಡಾಪಟು ಇವರುಗಳಿಗೆ 2010ನೇ ಸಾಲಿನ ಏಕಲವ್ಯ ಪ್ರಶಸ್ತಿಯನ್ನು, 2011ನೇ ಸಾಲಿನ ಏಕಲವ್ಯ ಪ್ರಶಸ್ತಿಗಳನ್ನು ಪ್ರದಾನ ಮಾಡುವ ಸಂದರ್ಭದಲ್ಲಿ ವಿತರಣೆ ಮಾಡುವಂತೆ ಆದೇಶ ಹೊರಡಿಸಿದೆ. ಆದರೆ, ಶ್ರೀ ಪಿ.ಸೋಮಶೇಖರ್, ಅಂಗವಿಕಲ ಕ್ರೀಡಾಪಟು ಇವರಿಗೆ ಕೊಟ್ಟಿದ್ದ ಪ್ರಶಸ್ತಿಯನ್ನು ಸದರಿಯವರು ತಪ್ಪು ಮಾಹಿತಿ ಕೊಟ್ಟಿದ್ದರ ಆಪಾದನೆ ಮೇಲೆ ರದ್ದುಮಾಡಿ, ಪರ್ಯಾಯವಾಗಿ 2010ನೇ ಸಾಲಿನ ವಿಕಲಚೇತನ ಕ್ರೀಡಾಪಟುವಿಗೆ 1 ಏಕಲವ್ಯ ಪ್ರಶಸ್ತಿ ಹೆಚ್ಚಿಗೆ ನೀಡಿದ್ದು, 2011ನೇ ಸಾಲಿನಲ್ಲಿ ಏಕಲವ್ಯ ಪ್ರಶಸ್ತಿ ಒಟ್ಟು 16 ಸಂಖ್ಯೆಗೆ ಏರಿದೆ.

.. 2

ಹಾಗೆಯೇ ಶ್ರೀ ರೋಷನ್ ಫೆರಾನ್ಸೋ, ಬಾಡಿಬಿಲ್ಡಿಂಗ್ ಕ್ರೀಡಾಪಟು, ಶ್ರೀ
ನವೀನ್, ಕರಾಟೆ ಕ್ರೀಡಾಪಟು ಇವರಿಗೂ ಕೂಡ ದಿನಾಂಕ: 05-05-2012ರ ಆದೇಶದನ್ವಯ,
ದಿನಾಂಕ: 29-08-2012ರಂದು ಏಕಲವ್ಯ ಪ್ರಶಸ್ತಿ ಪ್ರದಾನ ಮಾಡುವುದಾಗಿ ನಿರ್ದೇಶಕರು ತಿಳಿಸಿ,
2010ನೇ ಸಾಲಿಗೆ ವಿಕಲಚೇತನ ಕ್ರೀಡಾಪಟುವಾದ ಶ್ರೀ ರಾಜೇಶ್ ಸಿಂಘ್ ಇವರಿಗೆ ಏಕಲವ್ಯ
ಪ್ರಶಸ್ತಿ ವಿತರಿಸಲು ಅನುಮೋದನೆ ಕೋರಿರುತ್ತಾರೆ.

ಜೀವಮಾನ ಸಾಧನೆಗೆಂದು 2 ಪ್ರಶಸ್ತಿಗಳನ್ನು ನೀಡಬೇಕಾಗಿತ್ತು. ಆದರೆ, ನಿಗದಿ ಪಡಿಸಿರುವ ಸಂಖ್ಯೆ 2 ಜೀವಮಾನ ಸಾಧನೆ ಪ್ರಶಸ್ತಿ ಕೊಡುವುದು ಸಾಲದೆಂದು ಈ ಜೀವಮಾನ ಸಾಧನೆಗಾಗಿ ಹೆಚ್ಚು ಹೆಚ್ಚು ಅರ್ಜಿಗಳು ಪ್ರತಿ ಸಾಲಿನಲ್ಲೂ ಬರುತ್ತಿರುವುದಲ್ಲದೇ ಬೇಡಿಕೆ ಜಾಸ್ತಿ ಇದ್ದುದ್ದರ ಕಾರಣ ದಿನಾಂಕ: 22-08-2012ರಂದು ಸನ್ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ಆಯ್ಕೆ ಸಮಿತಿಯ ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ, 2011ನೇ ಸಾಲಿಗೆ ನೀಡುವ ಜೀವಮಾನ ಸಾಧನೆ ಪ್ರಶಸ್ತಿ ಸಂಖ್ಯೆಯನ್ನು 4ಕ್ಕೆ ಏರಿಸಲು ಸಮಿತಿಯು ತೀರ್ಮಾನ ಕೈಗೊಂಡಿದ್ದು, ಅದರಂತೆ, 2011ನೇ ಸಾಲಿಗೆ ಜೀವಮಾನ ಸಾಧನೆ ಪ್ರಶಸ್ತಿಗೆ ಸಮಿತಿಯು ಕೈಗೊಂಡ ನಿರ್ಣಯ ಸರಿಯಾಗಿರುತ್ತದೆಯೆಂದು ನಿರ್ದೇಶಕರು ತಿಳಿಸಿ, ಈ ಸಾಲಿನಿಂದ 4 ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲು ಸಭೆಯಲ್ಲಿ ತೀರ್ಮಾನಿಸಿದ ಮೇರೆಗೆ ಇದಕ್ಕೂ ಕೂಡ ಸರ್ಕಾರ ಅನುಮೋದಿಸುವಂತೆ ಕೋರಿರುತ್ತಾರೆ.

ಈವರೆವಿಗೆ ಏಕಲವ್ಯ ಪ್ರಶಸ್ತಿ ಪುರಸ್ಕೃತರಿಗೆ ನಗದು ಪುರಸ್ಕಾರ ರೂ. 1.00 ಲಕ್ಷ ನೀಡಲಾಗುತ್ತಿದ್ದು ಇದನ್ನು ರೂ. 2.00 ಲಕ್ಷಕ್ಕೆ ಹೆಚ್ಚಿಸುವಂತೆ ಮತ್ತು ಜೀವಮಾನ ಸಾಧನೆ ಪ್ರಶಸ್ತಿಗೆ ನೀಡಲಾಗುತ್ತಿದ್ದ ರೂ. 1.00 ಲಕ್ಷಗಳನ್ನು ರೂ. 1.50 ಲಕ್ಷಕ್ಕೆ ಹೆಚ್ಚಿಸುವಂತೆ ಆಯ್ಕೆ ಸಮಿತಿಯು ನಿರ್ಣಯಿಸಿರುವುದಲ್ಲದೇ, 2010ರಲ್ಲಿ ತಡೆಹಿಡಿದಂತಹ ಅರ್ಹ ಕ್ರೀಡಾಪಟುಗಳಿಗೆ, 2010ರಲ್ಲಿ ಏನು ನಗದು ಬಹುಮಾನ ಪ್ರದಾನ ಮಾಡಲಾಗಿದೆಯೋ ಅದನ್ನೇ ಮುಂದುವರೆಸಲು ಮತ್ತು 2011ರಲ್ಲಿ ಆಯ್ಕೆಗೊಂಡ ಅರ್ಹ ಕ್ರೀಡಾಪಟುಗಳಿಗೆ ಮತ್ತು ಜೀವಮಾನ ಸಾಧನೆ ಪ್ರಶಸ್ತಿ ಅರ್ಹರಿಗೆ ಕ್ರಮಾನುಸಾರ ರೂ. 2.00 ಲಕ್ಷ ಮತ್ತು ರೂ. 1.50 ಲಕ್ಷ ಕೊಡುವಂತೆ ಸಮಿತಿಯು ತೀರ್ಮಾನಿಸಿದ್ದು, ಈ ಸಂಬಂಧ ಸನ್ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ ಸಚಿವರು ಈಗಾಗಲೇ ಪತ್ರಿಕೆಗಳಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತಾರೆ.

2011ರ ಏಕಲವ್ಯ ಪ್ರಶಸ್ತಿ 15 ಜನರಿಗೆ ಕೊಡುವುದಕ್ಕೆ ಹೆಚ್ಚುವರಿ ರೂ. 15.00 ಲಕ್ಷ ಮತ್ತು ಜೀವಮಾನ ಸಾಧನೆ ಪ್ರಶಸ್ತಿದಾರರಿಗೆ ಹೆಚ್ಚುವರಿ ರೂ. 2.00 ಲಕ್ಷ ಒಟ್ಟಾರೆ ರೂ. 17.00 ಲಕ್ಷ ಹೆಚ್ಚುವರಿಯಾಗಿ ಬೇಕಾಗಿದ್ದು, ಇದನ್ನು ಇಲಾಖೆಗೆ ಸರ್ಕಾರ ಯೋಜನೆಯಡಿಯಲ್ಲಿ ಒದಗಿಸಿದ ಮೊತ್ತದಿಂದಲೇ ಭರಿಸಲಾಗುವುದೆಂದು ಹಾಗೂ ಈ ಸಂಬಂಧ ಯಾವುದೇ ಹೆಚ್ಚುವರಿ ಮೊತ್ತಕ್ಕೆ ಸರ್ಕಾರಕ್ಕೆ ಬೇಡಿಕೆ ಇಡುವುದಿಲ್ಲವೆಂದು ತಿಳಿಸಿ, ಈ ಬಗ್ಗೆ ಸರ್ಕಾರ ಸೂಕ್ತ ಆದೇಶ ಹೊರಡಿಸುವಂತೆ ನಿರ್ದೇಶಕರು ಸರ್ಕಾರವನ್ನು ಕೋರಿರುತ್ತಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರಿ ಆದೇಶ ಸಂಖ್ಯೆ: ಯುಸೇಇ 268 ಯುಸೇಕ್ರೀ 2012,</u>

<u>ಬೆಂಗಳೂರು, ದಿನಾಂಕ: 28-08-2012</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡಂತೆ ಆದೇಶವನ್ನು ಈ ಮೂಲಕ ಹೊರಡಿಸಲಾಗಿದೆ:-

ಅ. 2011ನೇ ಸಾಲಿಗೆ 16 ಅರ್ಹ ಕ್ರೀಡಾಪಟುಗಳಿಗೆ ಏಕಲವ್ಯ ಪ್ರಶಸ್ತಿ ಹಾಗೂ 4 ಅರ್ಹ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಲು ಕೆಳಕಂಡವರನ್ನು ಆಯ್ಕೆಮಾಡಿ ಈ ಮೂಲಕ ಸರ್ಕಾರವು ಆದೇಶಿಸಿದೆ.

**2011ನೇ ಸಾಲಿಗೆ ಏಕಲವ್ಯ ಪ್ರಶಸ್ತಿಗೆ ಆಯ್ಕೆಯಾಗಿರುವ ಕ್ರೀಡಾಪಟುಗಳ ಪಟ್ಟಿ**

| ಕ್ರ. ಸಂ. | ಕ್ರೀಡೆ | ಹೆಸರು ಶ್ರೀ / ಶ್ರೀಮತಿ |
|---|---|---|
| 1 | ಅಥ್ಲೆಟಿಕ್ಸ್ | ಕಾಶಿನಾಥ್ ನಾಯಕ್ |
| 2 | ಬ್ಯಾಸ್ಕೆಟ್‌ಬಾಲ್ | ಕೃತಿಕಾ ಲಕ್ಷ್ಮಣ್ |
| 3 | ಚೆಸ್ | ಸ್ಟ್ಯಾನಿ ಜಿ.ಎ. |
| 4 | ಕ್ರಿಕೆಟ್ | ವಿನಯ್‌ಕುಮಾರ್ ಆರ್. |
| 5 | ಹಾಕಿ | ಚೇಯಣ್ಣ ಎ.ಬಿ. |
| 6 | ಕಬಡ್ಡಿ | ಮಮತಾ ಪೂಜಾರಿ |
| 7 | ಪವರ್‌ಲಿಫ್ಟಿಂಗ್ | ನೇಹಾ ಹೆಚ್. |
| 8 | ರೈಫಲ್ ಶೂಟಿಂಗ್ | ರಾಕೇಶ್ ಮನ್‌ಪಟ್ |
| 9 | ರೋಲರ್ ಸ್ಕೇಟಿಂಗ್ | ಪ್ರತೀಕ್ ರಾಜ್ |
| 10 | ಈಜು | ಎ.ಪಿ.ಗಗನ್ ಉಲ್ಲಾಳ್ ಮಠ |
| 11 | ವೈಟ್‌ಲಿಫ್ಟಿಂಗ್ | ಹೆಚ್.ಎಸ್.ಚಂದ್ರಶೌರಿ ದೇವಿ |
| 12 | ಈಕ್ವೇಸ್ಟ್ರಿಯನ್ | ನಾಡಿಯಾ ಹರಿದಾಸ್ |
| 13 | ಸೈಕ್ಲಿಂಗ್ | ಸಾಬು ಈಶ್ವರ್ ಗಾಣಿಗರ್ |
| 14 | ವಾಲಿಬಾಲ್ | ಶ್ವೇತಾ ಎನ್. |
| 15 | ಅಂಗವಿಕಲ ಕ್ರೀಡಾಪಟು | ಸಿ.ವಿ.ರಾಜಣ್ಣ |
| 16 | ಅಂಗವಿಕಲ ಈಜು ಕ್ರೀಡಾಪಟು | ರಾಜೇಶ್ ಶಿಂಧೆ (2010ರ ಸಾಲಿಗೆಂದು) |

**2011ನೇ ಸಾಲಿಗೆ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಗೊಂಡಿರುವ ತರಬೇತಿದಾರರ ಪಟ್ಟಿ**

| ಕ್ರ. ಸಂ. | ಹೆಸರು ಶ್ರೀ / ಶ್ರೀಮತಿ | ಕ್ರೀಡೆ |
|---|---|---|
| 1 | ಶ್ಯಾಮಲಾ ಶೆಟ್ಟಿ | ಭಾರ ಎತ್ತುವ ತರಬೇತಿದಾರರು |
| 2 | ಸಿ.ಯು.ಅಶ್ವಥ್ | ಹಾಕಿ ತರಬೇತಿದಾರರು |
| 3 | ಪ್ರದೀಪ್‌ಕುಮಾರ್ | ಈಜು ತರಬೇತಿದಾರರು |
| 4 | ಸಿ.ಎಂ.ಕುರಣಿ | ಸೈಕ್ಲಿಂಗ್ ತರಬೇತಿದಾರರು |

ಆ. 2010ನೇ ಸಾಲಿನಲ್ಲಿ ತಡೆಹಿಡಿಯಲಾದ ಏಕಲವ್ಯ ಪ್ರಶಸ್ತಿಯನ್ನು ಶ್ರೀ ರೋಷನ್ ಫೆರಾವ್ರೋ, ಬಾಡಿಬಿಲ್ಡಿಂಗ್ ಕ್ರೀಡಾಪಟು, ಶ್ರೀ ಎಸ್. ನವೀನ್, ಕರಾಟೆ ಕ್ರೀಡಾಪಟು ಮತ್ತು ಶ್ರೀ ರಾಜೇಶ್ ಶಿಂಧೆ, ಅಂಗವಿಕಲ ಈಜು ಕ್ರೀಡಾಪಟು ಇವರಿಗೆ ಪ್ರದಾನ ಮಾಡಲು ಈ ಮೂಲಕ ಆದೇಶಿಸಲಾಗಿದೆ.

ಇ. ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 33483/2011ನೇ ಸಂಖ್ಯೆಯ ಪ್ರಕರಣದಲ್ಲಿ ದಿನಾಂಕ: 13-07-2012ರ ತೀರ್ಪಿನನ್ವಯ, ಕು: ಶರಣ್ಯ ಮಹೇಶ್, ರೋಲರ್ ಸ್ಕೇಟಿಂಗ್ ಕ್ರೀಡಾಪಟು ಇವರಿಗೆ 2010ರಲ್ಲಿ ನೀಡಿದ ಏಕಲವ್ಯ ಪ್ರಶಸ್ತಿ ಮತ್ತು ನಗದು ಪುರಸ್ಕಾರವನ್ನು ಹಿಂಪಡೆದು, ಇದನ್ನು ರಿಟ್ ಅರ್ಜಿದಾರರಾದ ಕು: ಪ್ರಜ್ಞಾ, ರೋಲರ್ ಸ್ಕೇಟಿಂಗ್ ಕ್ರೀಡಾಪಟು ಇವರಿಗೆ ನೀಡಲು ಸಹ ಈ ಮೂಲಕ ಆದೇಶಿಸಲಾಗಿದೆ.

ಈ. ಮೇಲ್ಕಂಡಂತೆ ಎಲ್ಲಾ ಪ್ರಶಸ್ತಿಗಳನ್ನು ದಿನಾಂಕ: 29-08-2012 ರಂದು ನಡೆಯುವ ಏಕಲವ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡುವುದು; ಮತ್ತು

ಉ. 2011ನೇ ಸಾಲಿನ ಏಕಲವ್ಯ ಪ್ರಶಸ್ತಿ ವಿಜೇತರುಗಳಿಗೆ ನಗದು ಪುರಸ್ಕಾರವನ್ನು ಪರಿಷ್ಕರಿಸಿ, ತಲಾ ರೂ. 2.00 ಲಕ್ಷಕ್ಕೆ ಹಾಗೂ ಜೀವಮಾನ ಸಾಧನೆ ಪ್ರಶಸ್ತಿ ವಿಜೇತರುಗಳಿಗೆ ತಲಾ ರೂ. 1.50 ಲಕ್ಷಕ್ಕೆ ಪರಿಷ್ಕರಿಸಿ ಈ ಮೂಲಕ ಆದೇಶಿಸಲಾಗಿದೆ. ಆದರೆ, 2010ರಲ್ಲಿ ತಡೆಹಿಡಿದಂತಹ ಅರ್ಹ ಕ್ರೀಡಾಪಟುಗಳಿಗೆ 2010ರಲ್ಲಿ ಏನು ನಗದು ಬಹುಮಾನ ಪ್ರದಾನ ಮಾಡಲಾಗಿದೆಯೋ ಅದನ್ನೇ ಮುಂದುವರೆಸತಕ್ಕದ್ದು.

ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ಅನುದಾನದಲ್ಲಿಯೇ ಭರಿಸತಕ್ಕದ್ದು ಹಾಗೂ ಯಾವುದೇ ಹೆಚ್ಚುವರಿ ಅನುದಾನ ವನ್ನು ಕೋರತಕ್ಕದಲ್ಲ.

ಸದರಿ ವೆಚ್ಚವನ್ನು ಪ್ರಸಕ್ತ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2204-00-104-0-02-015 (ಯೋಜನೆ) ಅಡಿಯಲ್ಲಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ. ಶ್ರೀನಿವಾಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಯುವಜನ ಸೇವಾ ಇಲಾಖೆ

ಗೆ,

1) ಮಹಾಲೇಖಪಾಲರು, (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2) ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3) ಸಂಬಂಧಿಸಿದ ಪ್ರಶಸ್ತಿ ವಿಜೇತರಿಗೆ (ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಮುಖಾಂತರ).
4) ಸಂಬಂಧಿಸಿದ ಆಯ್ಕೆ ಸಮಿತಿ ಸದಸ್ಯರುಗಳಿಗೆ (ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ಇವರ ಮುಖಾಂತರ).
5) ಉಪ ನಿರ್ದೇಶಕರು, ಟಿಎನ್‌ಎಂಸಿ., ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6) ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7) ಆಂತರಿಕ ಆರ್ಥಿಕ ಸಲಹೆಗಾರರು,ಯುವಜನ ಸೇವಾ ಇಲಾಖೆ, ಬ.ಮ.ಕಟ್ಟಡ,ಬೆಂಗಳೂರು.
8) ಮಾನ್ಯ ಯುವಜನಸೇವಾ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7/8), ವಿಧಾನಸೌಧ, ಬೆಂಗಳೂರು.
10) ಸರ್ಕಾರದ ಕಾರ್ಯದರ್ಶಿಗಳು, ಯುವಜನ ಸೇವಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
11) ಸರ್ಕಾರದ ಉಪ ಕಾರ್ಯದರ್ಶಿ, ಯುವಜನ ಸೇವಾ ಇಲಾಖೆ ಇವರ ಆಪ್ತ ಸಹಾಯಕರು.
12) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು.

# ಕರ್ನಾಟಕ ಸರ್ಕಾರ

ಸಂಖ್ಯೆ: ವೈಎಸ್‌ಡಿ/ಇವೈಡಬ್ಲ್ಯೂ/68/2022

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:11.04.2022.

## ತಿದ್ದುಪಡಿ ಆದೇಶ

ಸರ್ಕಾರದ ಆದೇಶ ಸಂಖ್ಯೆ: ಯುಸೇಇ 357 ಯುಸೇಕ್ರೀ 2009; ದಿನಾಂಕ:17.04.2010ರಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಕ್ರೀಡಾಪಟುವಾಗಿ, ತರಬೇತುದಾರರಾಗಿ ನಿರಂತರ ಸೇವೆ ಸಲ್ಲಿಸಿ ಸಾಧನೆ ಮಾಡಿದಂತಹ ಹಿರಿಯ ಕ್ರೀಡಾಪಟು/ಹಿರಿಯ ತರಬೇತುದಾರರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡುವ ಬಗ್ಗೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಸದರಿ ಆದೇಶ ಭಾಗದಲ್ಲಿ **'ಇಬ್ಬರು ಹಿರಿಯ ಕ್ರೀಡಾಪಟು/ತರಬೇತುದಾರರಿಗೆ'** ಎಂಬುದರ ಬದಲಿಗೆ 2020ನೇ ಸಾಲಿನಿಂದ ಅನ್ವಯವಾಗುವಂತೆ **"ಐವರು ಹಿರಿಯ ಕ್ರೀಡಾಪಟು/ತರಬೇತುದಾರರಿಗೆ"** ಎಂದು ಹಾಗೂ ಸದರಿ ಆದೇಶದ ಅನುಬಂಧದ ಕ್ರಮ ಸಂಖ್ಯೆ:4ರಲ್ಲಿ **'ಪ್ರತಿ ವರ್ಷ ಓರ್ವ ಅರ್ಹ ತರಬೇತುದಾರರಿಗೆ'** ಎಂಬುದರ ಬದಲಿಗೆ **"ಪ್ರತಿ ವರ್ಷ ಐವರು ಅರ್ಹ ಹಿರಿಯ ಕ್ರೀಡಾಪಟು/ತರಬೇತುದಾರರಿಗೆ"** ಎಂದು ತಿದ್ದಿ ಓದಿಕೊಳ್ಳುವುದು. ಇದನ್ನು ಹೊರತುಪಡಿಸಿ ಮೂಲ ಆದೇಶದಲ್ಲಿ ಇನ್ನಾವುದೇ ಬದಲಾವಣೆಗಳಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

H. Umesh Shastry 11/04/2022
**(ಎಂ ಉಮೇಶ್ ಶಾಸ್ತ್ರಿ)**
ಸರ್ಕಾರದ ಅಧೀನ ಕಾರ್ಯದರ್ಶಿ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

131
12-4-2022

**ಇವರಿಗೆ :**

1. ಪ್ರಧಾನ ಮಹಾಲೇಖಪಾಲರು (ಪ ಮತ್ತು ಇ) / (ಜಿ & ಎಸ್.ಎಸ್.ಎ) / (ಇ & ಆರ್.ಎಸ್.ಎ), ಕರ್ನಾಟಕ, ಪಿ.ಬಿ. ನಂ.5329, ಬೆಂಗಳೂರು.
2. ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳಿಗೆ) **(ಆಯುಕ್ತರ ಮುಖಾಂತರ)**
4. ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಆಮತ್ತುಆಕೋಶ), ವಿಧಾನಸೌಧ, ಬೆಂಗಳೂರು.
5. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
6. ಖಜನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
7. ಮಾನ್ಯ ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

30-04-2022

